113

## ಕರ್ನಾಟಕ ಸರ್ಕಾರದ ಸಚಿವಾಲಯ

ಸಂಖ್ಯೆ: ಆರ್‌ಡಿ 27 ಎಂಆರ್‌ಆರ್ 2003

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 16ನೇ ಜೂನ್ 2003.

### ಸುತ್ತೋಲೆ

ವಿಷಯ: ಮ್ಯುಟೇಶನ್ ಚಾರ್ಜಸ್ ಸಂಗ್ರಹಣೆ ಮತ್ತು ಅದನ್ನು ಪಿ.ಡಿ.ಖಾತೆಗೆ ರವಾನಿಸುವುದರ ಬಗ್ಗೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 50 ಟಿಆರ್‌ಎಂ 2003 ದಿ: 4-3-2003ರ ಮೂಲಕ ಕರ್ನಾಟಕ ಭೂಕಂದಾಯ ನಿಯಮಾವಳಿಗಳ ನಿಯಮ 137(2)(i)ದಲ್ಲಿ ಮ್ಯುಟೇಶನ್ ಶುಲ್ಕವನ್ನು ರೂ. 200ರಿಂದ ರೂ. 35ಕ್ಕೆ ಪರಿಷ್ಕರಿಸಲಾಗಿದೆ ಮತ್ತು ಒಂದು ಹೊಸ ಉಪನಿಯಮ 137(3)ರ ಮೂಲಕ ಇತರ ಎಲ್ಲಾ ವರ್ಗಗಳಿಗೂ ಪ್ರತಿ ಸರ್ವೆ ನಂಬರ್‌ಗೆ ರೂ.35ರಂತೆ ಮ್ಯುಟೇಶನ್ ಶುಲ್ಕವನ್ನು ನಿಗದಿಪಡಿಸಲಾಗಿದೆ. ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕಳುಹಿಸಲ್ಪಟ್ಟ ಈ ಅಧಿಸೂಚನೆಯ ಪ್ರತಿಯನ್ನು ಈ ಸುತ್ತೋಲೆಗೆ ಲಗತ್ತಿಸಲಾಗಿದೆ.

ತಾಲ್ಲೂಕು ಕಚೇರಿಗಳಲ್ಲಿ ಅರ್ಜಿಗಳನ್ನು ಸ್ವೀಕರಿಸಲು ಪ್ರತ್ಯೇಕ ಮ್ಯುಟೇಶನ್ ಕಿಯಾಸ್ಕ್‌ಗಳನ್ನು ಸ್ಥಾಪಿಸುವ ಸಲುವಾಗಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಣವನ್ನು ಬಿಡುಗಡೆ ಮಾಡಲು ಸರ್ಕಾರವು ಪ್ರತ್ಯೇಕ ಕ್ರಮ ಕೈಗೊಳ್ಳುತ್ತಿದೆ. ಅದಕ್ಕೆ ಅವಶ್ಯವಿರುವ ಸಾಫ್ಟ್‌ವೇರ್ ಅನ್ನು ಕೂಡ ಎಲ್ಲಾ ಸಮಾಲೋಚಕರುಗಳಿಗೆ ಒದಗಿಸಲಾಗಿದೆ. ಮ್ಯುಟೇಶನ್ ಮನವಿಯನ್ನು ಕಾರ್ಯಗತಗೊಳಿಸಲು ಪ್ರತಿ ಸರ್ವೆ ನಂಬರ್‌ಗೆ ರೂ. 35ರಂತೆ ಮ್ಯುಟೇಶನ್ ಶುಲ್ಕವನ್ನು ಸಂಗ್ರಹಿಸಲು ಮತ್ತು ಅದನ್ನು ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಗೆ ರವಾನಿಸಲು ತಹಸೀಲ್ದಾರರಿಗೆ ನಿರ್ದೇಶನ ನೀಡತಕ್ಕದ್ದು.

ಈ ಸುತ್ತೋಲೆಯೊಂದಿಗೆ ಒಂದು ನಮೂನೆಯನ್ನು ಲಗತ್ತಿಸಲಾಗಿದ್ದು, ಈ ನಮೂನೆಯಲ್ಲಿ ಮ್ಯುಟೇಶನ್‌ಗಳಿಂದ ಸಂಗ್ರಹಣೆಯಾದ ಬಳಕೆದಾರರ ಶುಲ್ಕದ ವಿವರಗಳನ್ನು ಪ್ರತಿ ತಿಂಗಳು ಕಳುಹಿಸಲ್ಪಡುವ ನಮೂನೆ A - D ಜೊತೆಯಲ್ಲಿಯೆ ಸರ್ಕಾರಕ್ಕೆ ಕಳುಹಿಸತಕ್ಕದ್ದು.

ಭೂಮಿ-3 ಆವೃತ್ತಿ ಕಾರ್ಯಾಚರಣೆಯಲ್ಲಿಲ್ಲದಂತಹ ತಾಲ್ಲೂಕುಗಳಲ್ಲಿ ಶುಲ್ಕವನ್ನು ಪರಿಷ್ಕೃತ ನಿಯಮಾವಳಿಗಳ ಅನ್ವಯ ಕೈಯಿಂದಲೇ ಸಂಗ್ರಹಣೆ ಮಾಡಿ ಪಿ.ಡಿ.ಖಾತೆಗೆ ರವಾನಿಸತಕ್ಕದ್ದು., ಎಲ್ಲ ತಾಲ್ಲೂಕುಗಳಲ್ಲೂ, ತಂತ್ರಾಂಶದ ಯಾವುದೇ ಆವೃತ್ತಿ ಕಾರ್ಯಾಚರಣೆಯಲ್ಲಿ ಇದ್ದರೂ ಸಹ, ಪ್ರತಿ ಸರ್ವೆ ನಂಬರ್‌ಗೆ ರೂ. 35ರಂತೆ ಶುಲ್ಕವನ್ನು ನಿಗದಿ ಪಡಿಸಲಾಗಿದೆ ಎಂದು ಮತ್ತೊಮ್ಮೆ ಸ್ಪಷ್ಟವಾಗಿ ತಿಳಿಸಲಾಗಿದೆ.

ನಂ. ಆರ್‌ಆರ್‌ಬಿ (ಹ) 03.04

ಈ ಸುತ್ತೋಲೆಯು ಕಂದಾಯ ಇಲಾಖೆ ಇಂಟರ್ ನೆಟ್ ಸೈಟ್ http://www.revdept.kar.nic.in ನಲ್ಲೂ ಲಭ್ಯವಿದೆ.

(ರಾಜೀವ್ ಚಾವ್ಲಾ)
ವಿಶೇಷ ಕಾರ್ಯದರ್ಶಿ (ಭೂಮಿ)
ಕಂದಾಯ ಇಲಾಖೆ

6/11/03

ಎಲ್ಲಾ ಜಿಲ್ಲಾಧಿಕಾರಿಗಳು

ನಂ. ಆರ್‌ಆರ್‌ಬಿ (ಹ) 19/03-04

ಪ್ರತಿ ಕ್ರಮಕ್ಕಾಗಿ ರವಾನಿಸಿದೆ

ಜಿಲ್ಲಾಧಿಕಾರಿಗಳ ಪರವಾಗಿ
ಹಾಸನ ಜಿಲ್ಲೆ, ಹಾಸನ.